**ಓ.ಎಸ್. – 184/2021**

**ಡಿ.ಡಬ್ಲೂ – 1**

**ಸಾಕ್ಷಿಯನ್ನು ದಿಃ 13.11.2025 ರಂದು ಪುನಃ ಕರೆಯಿಸಿ ಪ್ರಮಾಣೀಕರಿಸಲಾಯಿತು.**

**ಪಾಟೀ ಸವಾಲುಃ ವಾದಿ ಪರ ಶ್ರೀ ಕೆ.ವಿ.ಪಿ. ವಕೀಲರಿಂದ**

1. ಸರ್ವೇ ಸಂಖ್ಯೆ 74 ನ್ನು ನಾನು ಯಾವಾಗ ಖರೀದಿಸಿದೆ ಎಂದು ದಿನಾಂಕ ನೆನಪಿಲ್ಲ, 2016–2017 ರಲ್ಲಿ ಖರೀದಿಸಿರಬಹುದು. ನಾನು ಖರೀದಿಸುವ ಸಮಯದಲ್ಲಿ ಸರ್ವೇ ಸಂಖ್ಯೆ 74 ಕೆರೋಡಿ ಗ್ರಾಮದ ಮೂಲ ಸರ್ವೇ ಸಂಖ್ಯೆ 41 ಆಗಿತ್ತು ಎಂದರೆ ಸರಿ. ಖರೀದಿಗೂ ಮೊದಲು ಮೂಲ ಸರ್ವೇ ಸಂಖ್ಯೆ 41 ಸರ್ವೇ ಆಗಿ ಪೋಡಿಗೆ ಒಳಪಟ್ಟಿರುತ್ತದೆ ಎಂದರೆ ಸರಿ. ಖರೀದಿ ಪೂರ್ವದಲ್ಲಿ ನಾನೇ ಸರ್ವೇ ಸಂಖ್ಯೆ 41 ರ ಸರ್ವೇ ಪೋಡಿ ಕೆಲಸವನ್ನು ಮಾಡಿಸಿರುತ್ತೇನೆ ಎಂದರೆ ಸರಿಯಲ್ಲ. ಸಾಕ್ಷಿಯು ಮುಂದುವರೆದು ನನಗೆ ಸ್ವತ್ತನ್ನು ಮಾರಾಟ ಮಾಡಿದವರೇ ಸರ್ವೇ ಪೋಡಿಯನ್ನು ಮಾಡಿಸಿರುತ್ತಾರೆ ಎಂದು ನುಡಿಯುತ್ತಾರೆ. ನನಗೆ ಸ್ವತ್ತನ್ನು ಶಿವಮ್ಮ ಮತ್ತು ಲಿಂಗಮ್ಮ ಎಂಬುವವರು ಮಾರಾಟ ಮಾಡಿರುತ್ತಾರೆ.

2. ನಮ್ಮ ಜಮೀನಿನ ಉತ್ತರಕ್ಕೆ ವಾದಿಯ ಜಮೀನು ಬರುತ್ತದೆ ಎಂದರೆ ಸರಿಯಲ್ಲ. ಸಾಕ್ಷಿಯು ಮುಂದುವರೆದು ನನ್ನ ಜಮೀನಿನ ಪೂರ್ವಕ್ಕೆ ವಾದಿಯರ ಜಮೀನು ಬರುತ್ತದೆ ಎಂದು ನುಡಿಯುತ್ತಾರೆ. ನನ್ನ ಸ್ವತ್ತಿನ ಪೂರ್ವಕ್ಕೆ –ಸರ್ಕಾರಿ ಜಾಗ ಬರುತ್ತದೆ, ಪಶ್ಚಿಮಕ್ಕೆ – ರಸ್ತೆ ಬರುತ್ತದೆ. ಸದರಿ ರಸ್ತೆಯು ಗ್ರಾಮ ಪಂಚಾಯಿತಿಯಿಂದ ಮಾಡಿರುವ ರಸ್ತೆಯಾಗಿರುತ್ತದೆ. ಉತ್ತರಕ್ಕೆ – ಸರ್ವೇ ಸಂಖ್ಯೆ 64, 65, 66 ಬರುತ್ತದೆ. ದಕ್ಷಿಣಕ್ಕೆ – ಸರ್ಕಾರಿ ಜಾಗ ಬರುತ್ತದೆ. ಉಳವಿ – ಸೊರಬ ರಸ್ತೆಯಿಂದ ಆಶ್ರಯ ಕಾಲೋನಿಯ ಕಡೆಗೆ ಒಂದು ರಸ್ತೆ ಬರುತ್ತದೆ ಎಂದರೆ ಸರಿ. ಸದರಿ ರಸ್ತೆಯು ಹಿರಳೆ ರಸ್ತೆಗೆ ಹೋಗಿ ಸೇರುತ್ತದೆ. ಸದರಿ ರಸ್ತೆಯು ನಮ್ಮ ಜಮೀನಿನ ಪಶ್ಚಿಮ ದಿಕ್ಕಿಗೆ ಬರುತ್ತದೆ. ನನ್ನ ಜಮೀನಿನ ಪಶ್ಚಿಮಕ್ಕಿರುವ ರಸ್ತೆಯ ಅಗಲ 20 ರಿಂದ 25 ಅಡಿ ಇರುತ್ತದೆ. ರಸ್ತೆಯ ಪಕ್ಕದಲ್ಲಿ ನಾವು ಅಗಳವನ್ನು ಮಾಡಿರುತ್ತೇವೆ ಎಂದರೆ ಸರಿ. ಮೊದಲು ಚಿಕ್ಕದಾಗಿ ಇದ್ದ ಕಾರಣ ಅಗಳವನ್ನು ಈಗ ಜೆ.ಸಿ.ಬಿ. ಯಿಂದ ದೊಡ್ಡದಾಗಿ ಮಾಡಿರುತ್ತೇವೆ.

3. ರಸ್ತೆಯು ಹಿರಳೆ ರಸ್ತೆಗೆ ಹೋಗಿ ಸೇರಿದ ನಂತರ ಸರ್ವೇ ಸಂಖ್ಯೆ 41 ರ ಸರ್ಕಾರಿ ಕಾಡು ಬರುತ್ತದೆ ಎಂದರೆ ಸರಿ. ಸರ್ವೇ ಸಂಖ್ಯೆ 41 ರಿಂದ ವಾದಿಯರ ಸರ್ವೇ ಸಂಖ್ಯೆ 67 ಮತ್ತು 68 ರ ಸ್ವತ್ತುಗಳಿಗೆ ಹಾದು ಹೋಗಲು ದಾವಾ ರಸ್ತೆಯನ್ನು ಹೊರತುಪಡಿಸಿ ಬೇರೆ ಯಾವುದೇ ರಸ್ತೆಯು

ಇರುವುದಿಲ್ಲ ಎಂದರೆ ಸರಿಯಲ್ಲ. ಸಾಕ್ಷಿಯು ಮುಂದುವರೆದು ನನ್ನ ಜಮೀನಿನ ಪಕ್ಕದಲ್ಲಿ ಸರ್ವೇ ಸಂಖ್ಯೆ.41 ರಲ್ಲಿ ದಕ್ಷಿಣ ದಿಕ್ಕಿಗೆ ಚಿಕ್ಕದಾದ ರಸ್ತೆ ಇರುತ್ತದೆ, ಸದರಿ ಚಿಕ್ಕ ರಸ್ತೆಯು ಸರ್ವೇ ಸಂಖ್ಯೆ.67, 68 ಮತ್ತು ಇತರೆ ಜಮೀನುಗಳಿಗೆ ಹಾದು ಹೋಗಲು ಇರುತ್ತದೆ ಎಂದು ನುಡಿಯುತ್ತಾರೆ. ಸದರಿ ನಾನು ಹೇಳುತ್ತಿರುವ ರಸ್ತೆಗೆ ಯಾವುದೇ ಚರಂಡಿಗಳು ಇರುವುದಿಲ್ಲ,ಅದು ಸರ್ಕಾರಿ ಕಾಡು ಎಂದರೆ ಸರಿ.

4. ವಾದಿಯರು ತಮ್ಮ ಸರ್ವೇ ಸಂಖ್ಯೆ 67 ಮತ್ತು 68 ರ ಜಮೀನುಗಳಿಗೆ 4 ಕಡೆಯೂ ಬೇಲಿಯನ್ನು ಹಾಕಿದ್ದಾರೆ ಎಂದರೆ ಸರಿ. ಸಾಕ್ಷಿಯು ಮುಂದುವರೆದು ವಾದಿಯರು ಅಗಳವನ್ನು ಸಹ ಮಾಡಿಕೊಂಡಿರುತ್ತಾರೆ ಎಂದು ನುಡಿಯುತ್ತಾರೆ. ಆಶ್ರಯ ಯೋಜನೆಯ ರಸ್ತೆಯ ಮೂಲಕ ವಾದಿಯರ ಸರ್ವೇ ಸಂಖ್ಯೆ 67 ಮತ್ತು 68 ರ ಜಮೀನುಗಳಿಗೆ ಹೋಗಲು ಮೊದಲಿನಿಂದಲೂ ರೂಢಿಗತ ರಸ್ತೆ ಅಸ್ಥಿತ್ವದಲ್ಲಿತ್ತು ಎಂದರೆ ಸರಿಯಲ್ಲ. ಸದರಿ ರೂಢಿಗತ ರಸ್ತೆಯು ನನ್ನ ಜಮೀನಿನ ಪಶ್ಚಿಮದ ಅಂಚಿನಲ್ಲಿ ಹಾದುಹೋಗುತ್ತಿತ್ತು ಎಂದರೆ ಸರಿಯಲ್ಲ.

5. ನೀವು ಕೋಟ್ಯಂತರ ರೂ ವ್ಯವಹಾರದ ಕಂಟ್ರಾಕ್ಟ್ ಕೆಲಸವನ್ನು ಮಾಡುತ್ತೀರಿ ಎಂದರೆ ಸಾಕ್ಷಿಯು ಜೀವನಾಧಾರಕ್ಕೆ ಬೇಕಾದ ಕಂಟ್ರಾಕ್ಟ್ ಕೆಲಸವನ್ನು ಮಾಡುತ್ತೇನೆ ಎಂದು ನುಡಿಯುತ್ತಾರೆ. ನಾನು ರಾಜಕೀಯ ಮುಖಂಡನಾಗಿ ಕೆಲಸ ಮಾಡುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಸಮಾಜದ ಮುಖಂಡ ಎಂದರೆ ಸರಿ. ನನಗೆ ಸಾಕಷ್ಟು ಜವಾಬ್ದಾರಿಗಳು ಇವೆ ಎಂದರೆ ಸರಿ.

**ವಾದಿ ಪರ ವಕೀಲರ ಕೋರಿಕೆಯ ಮೇರೆಗೆ ಮುಂದುವರೆದ ಪಾಟೀ ಸವಾಲಿಗೆ ಮುಂದೂಡಲಾಯಿತು.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ರೀತ್ಯಾ ಗಣಕೀಕರಿಸಲಾಯ್ತು)

ಓದಿ ಹೇಳಿ ಕೇಳಿ ಸರಿ ಇದೆ

1 ನೇ ಹೆಚ್ಚುವರಿ ವ್ಯವಹಾರ ನ್ಯಾಯಾಧೀಶರು
ಮತ್ತು ಜೆಎಂಎಫ್‌ಸಿ, ಸಾಗರ